**ಆಕಾಶವಾಣಿ** **07.06.2024**

**ಪ್ರದೇಶ ಸಮಾಚಾರ**

**ಓದುತ್ತಿರುವವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

- **'ಉಳುವವನೇ ಒಡೆಯ' ಎಂದ, ಸಾಮಾಜಿಕ ನ್ಯಾಯದ ಹರಿಕಾರ, ದೇವರಾಜ ಅರಸು – ಮುಖ್ಯಮಂತ್ರಿ ಸಿದ್ದರಾಮಯ್ಯ.**
- **ಉತ್ತರಾಖಂಡದಲ್ಲಿ ಮೃತಪಟ್ಟ, ರಾಜ್ಯದ 9 ಜನರ ಕುಟುಂಬಗಳಿಗೆ, ರಾಜ್ಯಪಾಲ ಥಾವರಚಂದ ಗೆಹ್ಲೋಟ್, ಸಾಂತ್ವನ.**
- **'ಕಾಪ್ರಿನೋಪ್ಸಿಸ್ ಸಿನೆರಿಯಾ'; ವಿಶ್ವದ ಅಪರೂಪದ ಅಣಬೆಗೆ, ದಕ್ಷಿಣಕನ್ನಡದ ಅಡಕೆ ಕೃಷಿಕ, ಹರೀಶ್ ರೈ ದೇರ್ಲರಿಂದ, ಮರುಜೀವ.**
- **ಇಂದು, ವಿಶ್ವ ಆಹಾರ ಸುರಕ್ಷತಾ ದಿನಾಚರಣೆ.**

<><><>

**ಈಗ ವಾರ್ತೆಗಳ ವಿವರ**

<><><>

**ಹಾವನೂರು ಆಯೋಗ** ರಚಿಸಿ, ಹಿಂದುಳಿದ ವರ್ಗಗಳಿಗೆ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಮೀಸಲಾತಿ ಜಾರಿಗೆ ತಂದ, ದೇವರಾಜ ಅರಸು ಅವರು, ಬಡವರ, ಶೋಷಿತರ, ಸಾಮಾಜಿಕ ನ್ಯಾಯದ ಪರವಾಗಿದ್ದ ನಾಯಕ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಸಾಮಾಜಿಕ ನ್ಯಾಯದ ಹರಿಕಾರ, ಮಾಜಿ ಮುಖ್ಯಮಂತ್ರಿ, ದಿವಂಗತ ದೇವರಾಜ ಅರಸು ಅವರ, 42ನೇ ಪುಣ್ಯ ಸ್ಮರಣೆ ಅಂಗವಾಗಿ, ವಿಧಾನಸೌಧ ಆವರಣದಲ್ಲಿ ಅರಸು ಅವರ ಪ್ರತಿಮೆಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಗೌರವಾರ್ಪಿಸಿ ಮಾತನಾಡಿದರು. ಭೂ ಸುಧಾರಣಾ ಕಾಯ್ದೆ ಜಾರಿಗೆ ತಂದು, ಉಳುವವನೇ ಭೂಮಿಯ ಒಡೆಯ ಎಂದು ಘೋಷಿಸಿದ ಕೀರ್ತಿ ಅರಸು ಅವರಿಗೆ ಸಲ್ಲುತ್ತದೆ. ಅರಸು ಅವರು ಕರ್ನಾಟಕದ ಮುಖ್ಯಮಂತ್ರಿಯಾಗಿ, ಎಂಟು ವ ೯ಗಳ ಕಾಲ ಸಾಮಾಜಿಕ ನ್ಯಾಯದ ಅಡಿಪಾಯ ಹಾಕಿದರು ಎಂದರು.

<><><>

**ಉತ್ತರಾಖಂಡದ ಸಹಸ್ರತಾಲ್ ಚಾರಣ ಕೈಗೊಂಡು,** ಹವಾಮಾನ ವೈಪರೀತ್ಯದಿಂದ ಅಪಾಯಕ್ಕೆ ಸಿಲುಕಿ, ಕರ್ನಾಟಕದ 9 ಜನ ಮೃತಪಟ್ಟ ಘಟನೆ ತಿಳಿದು ದುಃಖವಾಗಿದೆ ಎಂದು, ರಾಜ್ಯಪಾಲ ಥಾವರಚಂದ ಗೆಹ್ಲೋಟ್ ತಿಳಿಸಿದ್ದಾರೆ. ಮೃತರ ಕುಟುಂಬಗಳಿಗೆ ಸಾಂತ್ವನ ಹೇಳಿ, ಮೃತರ ಆತ್ಮಕ್ಕೆ ಶಾಂತಿ ಸಿಗಲಿ; ನೈಸರ್ಗಿಕ ವಿಕೋಪದಲ್ಲಿ ಗಾಯಗೊಂಡವರು, ಶೀಘ್ರ ಚೇತರಿಸಲಿ ಎಂದು, ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪ್ರಕಟಿಸಿದ್ದಾರೆ.

<><><>

**ಉತ್ತರಾಖಂಡದ ಸಹಸ್ರತಾಲ್‌ಗೆ ಚಾರಣಕ್ಕೆ ತೆರಳಿ,** ಹವಾಮಾನ ವೈಪರೀತ್ಯದಿಂದ ಅಪಾಯಕ್ಕೆ ಸಿಲುಕಿದ್ದವರ ಪೈಕಿ, ರಕ್ಷಿಸಲಾದ 13 ಮಂದಿಯನ್ನು, ಗುರುವಾರ ರಾತ್ರಿ ವಿಮಾನದ ಮೂಲಕ, ಬೆಂಗಳೂರಿನ ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಕರೆ ತರಲಾಯಿತು. ರಕ್ಷಣಾ ಕಾರ್ಯಾಚರಣೆ ಉಸ್ತುವಾರಿಗೆ ತೆರಳಿದ್ದ, ಕಂದಾಯ ಖಾತೆ ಸಚಿವ ಕೃಷ್ಣ ಬೈರೇಗೌಡ ಅವರು, ಡೆಹ್ರಾಡೂನ್‌ನಿಂದ

ಬೆಂಗಳೂರಿಗೆ ಬಂದಿಳಿದರು. ಚಾರಣದ ವೇಳೆ ಹವಾಮಾನ ವೈಪರೀತ್ಯದಿಂದ ಮೃತಪಟ್ಟವರ ಸಂಖ್ಯೆ 9ಕ್ಕೆ ಏರಿಕೆಯಾಗಿದೆ. ಹಿಮಪಾತದಲ್ಲಿ ಮೃತಪಟ್ಟ 9 ಮಂದಿ ಕನ್ನಡಿಗರಲ್ಲಿ, ಧಾರವಾಡ ಜಿಲ್ಲೆ ಹುಬ್ಬಳ್ಳಿ ಮೂಲದ, ವಿನಾಯಕ ಹಾಗೂ ಸುಜಾತಾ ಮುಂಗರವಾಡಿ ಮತ್ತು ಉತ್ತರಕನ್ನಡ ಜಿಲ್ಲೆ ಶಿರಸಿಯ ಜಾಗನಳ್ಳಿ ಯುವತಿ ಪದ್ಮನಿ ಹೆಗಡೆ ಸೇರಿದ್ದಾರೆ ಎಂದು ವರದಿಗಳು ತಿಳಿಸಿವೆ. ಇಂದು 9 ಮೃತದೇಹಗಳನ್ನು ಉತ್ತರಕಾಶಿಯಿಂದ ರಸ್ತೆ ಮೂಲಕ ದಿಲ್ಲಿಗೆ ತಂದು, ವಿಮಾನದ ಮೂಲಕ, ಬೆಳಗ್ಗೆ ಬೆಂಗಳೂರಿಗೆ ತರಲಾಗುವುದು ಎಂದು, ಸಚಿವ ಕೃಷ್ಣ ಬೈರೇಗೌಡ ಮಾಹಿತಿ ನೀಡಿದರು.

<><><>

**ರಾಜ್ಯ ಸರ್ಕಾರ, ಚಾರಣಿಗರಿಗಾಗಿ** ವಿಶೇ ` ಘಟಕವೊಂದನ್ನು ಸ್ಥಾಪಿಸಲು ನಿರ್ಧರಿಸಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ತಿಳಿಸಿದ್ದಾರೆ. ಟ್ರೆಕ್ಕಿಂಗ್ ಮಾಡಲು ಬಯಸುವವರು, ಈ ಸೆಲ್‌ನಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು. ಈ ಅಧಿಕೃತ ಮಾಹಿತಿಯಿಂದ, ಸಂಬಂಧಿಸಿದ ಎಲ್ಲ ಇಲಾಖೆಗಳಿಗೆ, ಚಾರಣಿಗರ ಬಗ್ಗೆ ಸೂಕ್ತ ಮಾಹಿತಿ ಪಡೆಯಬಹುದಾಗಿದೆ. ತುರ್ತು ಸಂದರ್ಭಗಳಲ್ಲಿ ಸಕಾಲಿಕವಾಗಿ ಸರ್ಕಾರ ಸ್ಪಂದಿಸಬಹುದಾಗಿದೆ ಎಂದರು.

<><><>

**'ಕಾಪ್ರಿನೋಪ್ಸಿಸ್ ಸಿನೆರಿಯಾ'** ಎಂಬ ವೈಜ್ಞಾನಿಕ ಹೆಸರಿನ, ವಿಶ್ವದ ಅಪರೂಪದ ಅಣಬೆ ಪ್ರಬೇಧಕ್ಕೆ, ದಕ್ಷಿಣಕನ್ನಡ ಜಿಲ್ಲೆ ಪುತ್ತೂರಿನ ಕೃಷಿಕ, ಹರೀಶ್ ರೈ ದೇರ್ಲ ನಿರಂತರ ಪ್ರಯೋಗಗಳ ಮೂಲಕ ಮರುಜೀವ ನೀಡಿದ್ದಾರೆ. ಮಳೆಗಾಲದಲ್ಲಿ ತೇವಾಂಶ ಹೀರಿಕೊಂಡು, ಅಡಕೆ ಸಿಪ್ಪೆಯ ಮೇಲೆ ಅರಳುವ ಈ ಅಣಬೆ ಪ್ರಬೇಧ, ಭಾರತದ ಸೇವಿಸಬಹುದಾದ 283 ಅಣಬೆಗಳ ಪೈಕಿ ಒಂದು ಎಂದು ಗುರುತಿಸಲಾಗಿದೆ. ಕ್ಯಾಲಿಕಟ್ ವಿಶ್ವವಿದ್ಯಾಲಯದಲ್ಲಿ, ಸಿ.ಪಿ.ಸಿ.ಆರ್.ಐ. ವತಿಯಿಂದ, ಹೊಸ ಅಣಬೆ ಪ್ರಬೇಧದ ಬಗ್ಗೆ ಸಂಶೋಧನೆ ನಡೆದಿದೆ. ಪುತ್ತೂರಿನ ಹರೀಶ್ ರೈ ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

**ಹರೀಶ್ ರೈ ದೇರ್ಲ ಧ್ವನಿ 34 ಸೆಕೆಂದುಗಳು**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಕಲುಷಿತ ಆಹಾರ ಮತ್ತು ನೀರಿನ ಸೇವನೆಯಿಂದ,** ಆರೋಗ್ಯದ ಮೇಲಾಗುವ ಅಡ್ಡ ಪರಿಣಾಮಗಳ ಕುರಿತು, ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯಲು ಹಾಗೂ ಜನ ಜಾಗ್ರತಿ ಮೂಡಿಸಲು, ಇಂದು ವಿಶ್ವ ಆಹಾರ ಸುರಕ್ಷತಾ ದಿನ ಆಚರಿಸಲಾಗುತ್ತಿದೆ.

<><><>

**ಪ್ರತಿಷ್ಠಿತ ಜೆ.ಜೆ.ಸ್ಕೂಲ್ ಆಫ್ ಆರ್ಟ್ ಮುಂಬೈನ,** ಜಹಾಂಗೀರ ಆರ್ಟ್ ಗ್ಯಾಲರಿಯಲ್ಲಿ, ರಾಜ್ಯದ ಹೆಸರಾಂತ ಚಿತ್ರ ಕಲಾವಿದ, ಧಾರವಾಡದ ಸರ್ಕಾರಿ ಕಲಾ ಮಹಾವಿದ್ಯಾಲಯದ ಉಪನ್ಯಾಸಕ, ಎಸ್.ಕೆ.ಪತ್ತಾರ್ ಅವರ, ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಒಂದು ವಾರ ಕಾಲ ಆಯೋಜಿತವಾಗಿದೆ.

<><><>

**ಅಂತಾರಾಷ್ಟ್ರೀಯ ಖ್ಯಾತಿಯ,** ಧಾರವಾಡದ ಕಲಾವಿದೆ, ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ ಪುರಸ್ಕೃತರಾದ, ಗಾಯತ್ರಿ ದೇಸಾಯಿ, ಈ ಚಿತ್ರಕಲಾ ಪ್ರದರ್ಶನವನ್ನು ಉದ್ಘಾಟಿಸಿದರು.

<><><>

**ಬೆಂಗಳೂರಿನ ಖ್ಯಾತ ಶಿಲ್ಪ ಕಲಾವಿದ,** ಜಕಣಾಚಾರಿ ಪ್ರಶಸ್ತಿ ಪುರಸ್ಕೃತ ವೆಂಕಟಾಚಲಪತಿ, ಅಪರೂಪದ ಚಿತ್ರಕಲಾ ಪ್ರದರ್ಶನದ ಮಾಹಿತಿ ಪತ್ರಕ ಬಿಡುಗಡೆಗೊಳಿಸಿದರು.

<><><>

**ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನದ ಕುರಿತು,** ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಕಲಾವಿದ ಎಸ್.ಕೆ.ಪತ್ತಾರ.

<><><>

**ಕಲಾವಿದ ಎಸ್.ಕೆ. ಪತ್ತಾರ ಧ್ವನಿ 34 ಸೆಕೆಂದುಗಳು**

<><><>

**ಕಾರವಾರ ಅರಣ್ಯ ವಿಭಾಗದ,** ಕೊಸ್ಟಲ್ ಮತ್ತು ಮರೈನ್ ಇಕೋ ಸಿಸ್ಟಮ್ ಘಟಕದ ವತಿಯಿಂದ, ಕಾಳಿ ನದಿ ಹಿನ್ನೀರಿನ ಕಿನ್ನರ ಗ್ರಾಮದ ನಡುಗಡ್ಡೆಯಲ್ಲಿ, ವಿವಿಧ ಜಾತಿಯ ಕಾಂಡ್ಲಾ ಕೋಡು Mangrove Propagules ಮತ್ತು ಸಸ್ಯಗಳ ಮಧ್ಯೆ, ವಿಶ್ವ ಪರಿಸರ ದಿನ ಆಚರಿಸಲಾಯಿತು.

<><><>

**ಗದುಗಿನ ಸಾಲು ಮರದ ತಿಮ್ಮಕ್ಕ ಉದ್ಯಾನದಲ್ಲಿ,** ಅರಣ್ಯ ಇಲಾಖೆ ಪರಿಸರ ದಿನ ಆಚರಿಸಿತು.

<><><>

**ಮುತ್ಸದ್ದಿ ಅನಂತಕುಮಾರ ಅವರು,** 2016 ರಲ್ಲಿ ಚಾಲನೆ ನೀಡಿದ, 'ಸಸ್ಯಾ ಗ್ರಹ' ಯೋಜನೆ, 440ನೇ ವಾರದಲ್ಲಿ ಮುನ್ನಡೆದಿದೆ ಎಂದು ಅದಮ್ಯ ಚೇತನದ ತೇಜಸ್ವಿನಿ ಅನಂತಕುಮಾರ ತಿಳಿಸಿದ್ದಾರೆ.

<><><>

**ಕಲಬುರಗಿ ಜಿಲ್ಲೆಯ** ಆಳಂದ, ಚಿತ್ತಾಪೂರ ಹಾಗೂ ಚಿಂಚೋಳಿ ವಲಯಗಳ ಸಸ್ಯಕ್ಷೇತ್ರಗಳಲ್ಲಿ, ಸಸಿಗಳು ಸಾರ್ವಜನಿಕ ವಿತರಣೆಗೆ ಲಭ್ಯ ಎಂದು, ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿ ಸುಮೀತ ಪಾಟೀಲ ತಿಳಿಸಿದ್ದಾರೆ.

<><><>

**ಕರ್ನಾಟಕ, ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ** ಅಭಿವೃದ್ಧಿ ನಿಗಮದ, ಆರ್ಥಿಕ ಅವ್ಯವಹಾರದ ಪ್ರಕರಣಕ್ಕೆ ಸಂಬಂಧಿಸಿ, ಪರಿಶಿಷ್ಟ ಪಂಗಡಗಳ ಕಲ್ಯಾಣ ಖಾತೆ ಸಚಿವ ಬಿ.ನಾಗೇಂದ್ರ, ಗುರುವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

<><><>

**ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆ,** ಉಡುಪಿಯ ಅಜ್ಜರಕಾಡು ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಿರುವ, ರಾಜ್ಯ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನ, ಮಹಿಳೆಯರ ವಿಭಾಗದ ಶಾಟ್‌ಪಟ್‌ನಲ್ಲಿ, ಮೈಸೂರಿನ ಅಂಬಿಕಾ ಪ್ರಥಮ ಸ್ಥಾನ ಗಳಿಸಿದ್ದಾರೆ. **ಪುರುಷರ 200 ಮೀಟರ್ಸ್ ಓಟದಲ್ಲಿ,** ಉಡುಪಿಯ ಅಭಿನ್ ದೇವಾಡಿಗ ಚಿನ್ನ ಗೆದ್ದರು. **ಬೆಂಗಳೂರಿನ ಜ್ಯೋತಿಕಾ,** ಮಹಿಳೆಯರ ವಿಭಾಗದ 200 ಮೀಟರ್ಸ್ ಓಟದಲ್ಲಿ, ಮೊದಲಿಗರಾದರು. **ಯೂಥ್ ವಿಭಾಗದ 200 ಮೀಟರ್ಸ್ ಓಟದಲ್ಲಿ,** ದಕ್ಷಿಣ ಕನ್ನಡದ ಹಷ್ಮಿತ ಸಾಲಿಯಾನ್ ಮತ್ತು ರೀತು ಶ್ರೀ, ಕ್ರಮವಾಗಿ ಬಾಲಕ ಹಾಗೂ ಬಾಲಕಿಯರ ವಿಭಾಗದ ಚಿನ್ನ ತಮ್ಮದಾಗಿಸಿಕೊಂಡರು.

<><><>

**ರಾಜ್ಯಾದ್ಯಂತ, ಭಾನುವಾರ 9ನೇ ತಾರೀಖಿನ ವರೆಗೆ,** ತುಂತುರು ಮಳೆ, ಗುಡುಗು, ಮಿಂಚು ಮತ್ತು ಬಿರುಗಾಳಿ ಸಹಿತ, ಮಳೆಯಾಗುವ ಸಾಧ್ಯತೆಯಿದೆ ಎಂದು, ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಮುನ್ಸೂಚನೆ ನೀಡಿದೆ.

9ರ ವರೆಗೆ ರಾಜ್ಯದ ಉತ್ತರ ಒಳನಾಡು ಜಿಲ್ಲೆಗಳಲ್ಲಿ, ನಾಳೆಯಿಂದ 12ನೇ ತಾರೀಖಿನ ವರೆಗೆ, ಕರಾವಳಿ ಜಿಲ್ಲೆಗಳು ಹಾಗೂ ಮಲೆನಾಡಿನಲ್ಲಿ, ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು, ಮಾಹಿತಿ ನೀಡಿದೆ.

<><><>

**ಕಲಬುರಗಿಯಲ್ಲಿ ದಿನದ ಗರಿಷ್ಠ ಉಷ್ಣಾಂಶ,** 35 ದಶಾಂಶ 5 ಡಿಗ್ರಿ ಸೆಲ್ಸಿಯೆಸ್ ದಾಖಲಾಗಿದೆ.

<><><>

**ಈಗ ಸಂಕ್ಷಿಪ್ತ ಸುದ್ದಿಗಳು:**

<><><>

**18ನೇ ಲೋಕಸಭೆ ಮಾದರಿ ನೀತಿ ಸಂಹಿತೆ,** ನಿನ್ನೆ ಗುರುವಾರ ಅಂತ್ಯಗೊಂಡಿತು.

<><><>

**ಬೆಂಗಳೂರಿನ, ಡಿಫೆನ್ಸ್ ಇನ್‌ಸ್ಟಿಟ್ಯೂಟ್ ಆಫ್ ಕ್ವಾಲಿಟಿ ಅಶ್ಯೂರೆನ್ಸ್** (ಡಿ.ಐ.ಕ್ಯೂ.ಎ.)ಗೆ ಸಾಮರ್ಥ್ಯ ವರ್ಧನೆ ಆಯೋಗದಿಂದ, ಪ್ರತಿಷ್ಠಿತ 'ಅತಿ ಉತ್ತಮ' ಮಾನ್ಯತೆ ದೊರೆತಿದೆ.

<><><>

**ಮಂಡ್ಯದಲ್ಲಿ** ಮಕ್ಕಳ ಸಾಹಿತ್ಯ ಸಂಭ್ರಮ, ಸಾಹಿತ್ಯ ಕೋಡೀಕರಣ ಕಾರ್ಯಗಾರ ಜರುಗಿತು.

<><><>

<><><>

**ಸರ್ಕಾರದ ಯೋಜನೆಗಳನ್ನು ಅರ್ಹರಿಗೆ ತಲುಪಿಸಲು,** ಬ್ಯಾಂಕ್‌ಗಳ ಸಹಕಾರ ಮುಖ್ಯ ಎಂದು, ಧಾರವಾಡ ಜಿಲ್ಲಾ ಪಂಚಾಯಿತಿ ಸಿ.ಇ.ಓ., ಟಿ.ಕೆ. ಸ್ವರೂಪಾ ಹೇಳಿದ್ದಾರೆ.

<><><>

**ವಿಧಾನಸಭೆ ಮಾಜಿ ಸಭಾಪತಿ,** ದಿವಂಗತ ಗುದ್ಲೆಪ್ಪ ಹಳ್ಳಿಕೇರಿ ಹಾಗೂ ಮಾಜಿ ಮುಖ್ಯಮಂತ್ರಿ ಎಸ್.ಆರ್. ಬೊಮ್ಮಾಯಿ ಅವರ ಜನ್ಮ ದಿನಾಚರಣೆ ಅಂಗವಾಗಿ, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವತಿಯಿಂದ ಗೌರವಾರ್ಪಣೆ ಜರುಗಿತು.

<><><>

**ಮುಂಗಾರು ಹಂಗಾಮಿಗೆ,** ಗದಗ ಜಿಲ್ಲಾದ್ಯಂತ, ಬಿತ್ತನೆ ಬೀಜಗಳ ಹಾಗೂ ರಸ ಗೊಬ್ಬರದ ಅಗತ್ಯ ದಾಸ್ತಾನು ಮಾಡಲಾಗಿದೆ ಎಂದು, ಕೃಷಿ ಇಲಾಖೆ ಜಂಟಿ ನಿರ್ದೇಶಕಿ ತಾರಾಮಣಿ ತಿಳಿಸಿದ್ದಾರೆ.

<><><>

**ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ, ಮತ್ತು ರಫ್ತು ನಿಗಮದ** ಉತ್ತರ ಕನ್ನಡ ಜಿಲ್ಲಾ ನೋಡಲ್ ಅಧಿಕಾರಿ ಶಿವಕುಮಾರ್, ಉತ್ತರಕನ್ನಡ ಜಿಲ್ಲೆಯ ಬಿತ್ತನೆ ಬೀಜ ಹಾಗೂ ರಸಗೊಬ್ಬರ ದಾಸ್ತಾನಿಗೆ ಭೇಟಿ ನೀಡಿದರು.

<><><>

**ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ,** ಎಲ್ಲ ನ್ಯಾಯಾಲಯಗಳಲ್ಲಿ, ಜುಲೈ 13 ರಂದು, ರಾಷ್ಟ್ರೀಯ ಲೋಕ್ ಅದಾಲತ್, ಆಯೋಜಿಸಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **‘ಉಳುವವನೇ ಒಡೆಯ’ ಎಂದ,** ಸಾಮಾಜಿಕ ನ್ಯಾಯದ ಹರಿಕಾರ, ದೇವರಾಜ ಅರಸು – ಮುಖ್ಯಮಂತ್ರಿ ಸಿದ್ದರಾಮಯ್ಯ.
- **ಉತ್ತರಾಖಂಡದಲ್ಲಿ ಮೃತಪಟ್ಟ,** ರಾಜ್ಯದ 9 ಜನರ ಕುಟುಂಬಗಳಿಗೆ, ರಾಜ್ಯಪಾಲ ಥಾವರಚಂದ ಗೆಹ್ಲೋಟ್, ಸಾಂತ್ವನ.
- **‘ಕಾಪ್ರಿನೋಪ್ಸಿಸ್ ಸಿನೆರಿಯಾ’;** ವಿಶ್ವದ ಅಪರೂಪದ ಅಣಬೆಗೆ, ದಕ್ಷಿಣಕನ್ನಡದ ಅಡಕೆ ಕೃಷಿಕ, ಹರೀಶ್ ರೈ ದೇರ್ಲರಿಂದ, ಮರುಜೀವ.
- **ಇಂದು, ವಿಶ್ವ ಆಹಾರ ಸುರಕ್ಷತಾ ದಿನಾಚರಣೆ.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.**

<><><>

**ಹರ್ಷ**